# ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಸಂಕ್ಷಿಪ್ತ ಪಕ್ಷಿ ನೋಟ

# ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಪಕ್ಷಿನೋಟ

''ಧರೆಯೊಳೆಲ್ಲೆ ಇರಲಿ ಮರೆಯಲಾರೆ ನಾ ಮಧುಗಿರಿಯ''ಎಂಬ ಕವಿವಾಣಿಯೇ 'ಏಕಶಿಲಾನಗರಿ' ಮಧುಗಿರಿಯ ಹಿರಿಮೆಯನ್ನು ಸಾರುತ್ತದೆ. ಪಟ್ಟಣದ ಉತ್ತರಕ್ಕೆ ಇರುವ ಜೇನುಗುಡ್ಡ ಎಂಬ ಗುಡ್ಡದಿಂದ ಈ ಪಟ್ಟಣಕ್ಕೆ ಮಧುಗಿರಿ ಎಂಬ ಹೆಸರು ಬಂದಿದೆ. ಮಧುಗಿರಿಯು ಏಷ್ಯಾಖಂಡದಲ್ಲಿಯೇ ಎರಡನೇ ದೊಡ್ಡ ಏಕಶಿಲಾ ಬೆಟ್ಟವಾಗಿದೆ. ಮಧುಗಿರಿ 3.930ಅಡಿ ಎತ್ತರದಲ್ಲಿರುವ ಏಕೈಕ ಬೆಟ್ಟ ಇದು ತುಮಕೂರು ಪಟ್ಟಣದಿಂದ 43 ಕಿ.ಮೀ.ಉತ್ತರದಲ್ಲಿದೆ. ವಿಜಯನಗರ ಕಾಲದಲ್ಲಿ ಸ್ಥಳೀಯ ಮುಖ್ಯಸ್ಥನಾಗಿದ್ದ ನಾಗಿರೆಡ್ಡಿ ಎಂಬುವರಿಂದ ಮಧುಗಿರಿ ಕೋಟೆ ನಿರ್ಮಿಸಲ್ಪಟ್ಟಿದೆ. ಅಲ್ಲದೆ ಈ ಕೋಟೆಯ ಆವರಣದಲ್ಲಿ ಜೈನ ದೇವಾಲಯವು ಹಾಗೂ ಪಟ್ಟಣದ ಹೃದಯ ಭಾಗದಲ್ಲಿ ಇತಿಹಾಸ ಪ್ರಸಿದ್ದ ವೆಂಕಟರಮಣ ಹಾಗೂ ಮಲ್ಲೇಶ್ವರ ದೇವಾಲಯಗಳು ಅತಿ ಪ್ರಮುಖವಾಗಿವೆ. ಈ ದೇವಾಲಯಗಳು ದ್ರಾವಿಡ ಶೈಲಿಯಲ್ಲಿ ವಿಜಯನಗರ ವಂಶಸ್ಥರು ಸ್ಥಾಪಿಸಿದ ದೇವಾಲಯಗಳಾಗಿದೆ. ಈ ಹಿಂದೆ ಮದ್ದಗಿರಿ ಎಂದು ಕರೆಯಲ್ಪಡುತಿದ್ದ ಪಟ್ಟಣವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಉಪವಿಭಾಗಾಧಿಕಾರಿಗಳಾಗಿದ್ದಾಗ ಮಧುಗಿರಿ ಎಂದು ಮರುನಾಮಕರಣ ಮಾಡಿದರು.

ವಿಸ್ತಾರವಾದ ತುಮಕೂರು ಜಿಲ್ಲೆಯನ್ನು, ಶೈಕ್ಷ್ಣಣಿಕ ಅಭಿವೃದ್ಧಿ ಮತ್ತು ದಕ್ಷ ಆಡಳಿತದ ದೃಷ್ಠಿಯಿಂದ ತುಮಕೂರು ದಕ್ಷಿಣ ಮತ್ತು ತುಮಕೂರು ಉತ್ತರ ಎಂದು ವಿಭಜಿಸಿ, ತುಮಕೂರು ಉತ್ತರ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿಯನ್ನು ಮಾರ್ಚ್ 2001 ರಿಂದ ಮಧುಗಿರಿಯಲ್ಲಿ ವಿಧ್ಯುಕ್ತವಾಗಿ ಪ್ರಾರಂಭಿಸಲಾಯಿತು. ತುಮಕೂರು ಉತ್ತರ ಜಿಲ್ಲೆಯ ಕೊರಟಗೆರೆ, ಮಧುಗಿರಿ, ಪಾವಗಡ ಮತ್ತು ಸಿರಾ ತಾಲ್ಲೋಕುಗಳು ಹಿಂದುಳಿದ ಬರಪೀಡಿತ ಪ್ರದೇಶಗಳಿಂದ ಕೂಡಿರುತ್ತದೆ. ಈ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 4692 ಚ.ಕೀ.ಮೀ ಆಗಿದ್ದು. ಒಟ್ಟು 1557 ಜನವಸತಿ ಇರುವ ಗ್ರಾಮಗಳನ್ನು ಒಳಗೊಂಡಿದೆ. ಮಧುಗಿರಿಯಲ್ಲಿರುವ ಏಕ ಶಿಲಾಬೆಟ್ಟ ಏಷ್ಯಾ ಖಂಡದಲ್ಲಿಯೇ ಪ್ರಥಮವಾದುದಾಗಿದೆ.

ಉಪನಿರ್ದೇಶಕರ ಕಛೇರಿ ಅಸ್ಥಿತ್ವಕ್ಕೆ ಬಂದ ನಂತರ ಆಡಳಿತಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಸುಧಾರಣೆಯ ಪಥದಲ್ಲಿದ್ದು ಕೇಂದ್ರ ಕಛೇರಿಯು ಮಧುಗಿರಿಯಲ್ಲಿದೆ. ತಾಲ್ಲೂಕುಗಳಲ್ಲಿಯ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಆಯಾ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

ಈ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿಯೇ ಇದ್ದು, ಉರ್ದು ಮತ್ತು ತೆಲುಗು ಭಾಷೆಯನ್ನು ಮಾತನಾಡುವ ಪ್ರದೇಶಗಳನ್ನು ಕೂಡ ಒಳಗೊಂಡಿರುವುದರಿಂದ ಉರ್ದು ಮಾಧ್ಯಮದ ಶಾಲೆಗಳನ್ನು ಕೂಡ ನಡೆಸಲಾಗುತ್ತಿದೆ. ಜಿಲ್ಲೆಯ ಜನತೆ ಬಹುತೇಕ ಕೃಷಿ ಆಧಾರಿತ ಜೀವನ ನಡೆಸುತ್ತಿದ್ದು ಅತ್ಯಂತ ಹಿಂದುಳಿದ ಪರಿಶಿಷ್ಠ ಜಾತಿ ಮತ್ತು ಪಂಗಡದ ಜನಸಂಖ್ಯೆ ಹೆಚ್ಚಾಗಿದೆ. ವಿಶೇಷವೆಂದರೆ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಪಾವಗಡ ತಾ. ನ್ನು ಅಂದ್ರಪ್ರದೇಶವು ಸುತ್ತುವರೆದಿದ್ದು ಬಹುಸಂಖ್ಯಾತ ಜನ ತೆಲುಗು ಭಾಷೆ ಮಾತನಾಡುವವರಿದ್ದಾರೆ. ಸದರಿ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಭಾಷೆಯ ತೊಡಕು ಇರುವುದರಿಂದ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ.

ಜಿಲ್ಲೆಯ ಸಾಕ್ಷರತಾ ಪ್ರಮಾಣ 69.99 ಇದ್ದು, ಮಹಿಳಾ ಸಾಕ್ಷರತಾ ಪ್ರಮಾಣ 60.94 ಮತ್ತು ಪುರುಷರ ಸಾಕ್ಷರತಾ ಪ್ರಮಾಣ 79.04 ಇರುತ್ತದೆ.

ಶೈಕ್ಷಣಿಕ ಈ ಭಾಗದ ಜನರಿಗೆ ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಈ ಜಿಲ್ಲೆಯ ಶೈಕ್ಷಣಿಕ ಪ್ರಗತಿ ಸರಾಸರಿ ಒಟ್ಟು 56.78 ಆಗಿರುತ್ತದೆ. ಅತ್ಯಂತ ಕನಿಷ್ಠ ಸಾಕ್ಷರತೆ ಪಾವಗಡ ತಾಲ್ಲೂಕು ಹೊಂದಿದೆ. ಪ್ರವರ್ಗ–1 ರ ಗೊಲ್ಲರ ಸಂಖ್ಯೆ ಸಿರಾ ಭಾಗದಲ್ಲಿ ಹೆಚ್ಚು. ಕುರಿ ಕಾಯುವ ಕಸುಬು ಮಾಡುವವರಾಗಿದ್ದು ಅರೆ ಅಲೆಮಾರಿಗಳಾಗಿರುತ್ತಾರೆ. ಇವರ ಮತ್ತು ಅಲ್ಪಸಂಖ್ಯಾತರಿಗೆ ಶಿಕ್ಷಣ ನೀಡುವುದು ನಮ್ಮ ಜಿಲ್ಲೆಯ ಸವಾಲಾಗಿದೆ.

ಮಧುಗಿರಿ ಶೈಕ್ಷಣಿಕ ಜಿಲ್ಲೆಯು ತನ್ನ ವ್ಯಾಪ್ತಿಯಲ್ಲಿ 04 ಕಂದಾಯ ತಾಲ್ಲೂಕುಗಳನ್ನು 04 ಶೈಕ್ಷಣಿಕ ವಲಯಗಳು 04 ವಿಧಾನಸಭಾ ಮತ ಕ್ಷೇತ್ರ, ತುಮಕೂರು ಮತ್ತು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಒಳಗೊಂಡಿರುತ್ತದೆ. 23 ಜಿಲ್ಲಾ ಪಂಚಾಯತ್ ಸದಸ್ಯರನ್ನು ಹೊಂದಿರುತ್ತದೆ.

ಜಿಲ್ಲಾ ಪಂಚಾಯತ್, ತುಮಕೂರು

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಉತ್ತರ ಮಧುಗಿರಿ

## ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ

| ಕ್ರ.ಸಂ. | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆಗಳು |
|---|---|---|---|---|
| 1 | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 1 | 1 | 0 |
| 3 | ಡಿ.ವೈ.ಪಿ.ಸಿ. ಎಸ್.ಎಸ್.ಎ. ಮಧುಗಿರಿ | 1 | 1 | 0 |
| 4 | ಡಿ.ವೈ.ಪಿ.ಸಿ. ಆರ್.ಎಂ.ಎಸ್.ಎ. ಮಧುಗಿರಿ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು (ಮ.ಉ.ಯೋ) | 0 | 0 | 0 |
| 6 | ವಿಷಯ ಪರಿವೀಕ್ಷಕರು | 5 | 4 | 1 |
| 7 | ಎ.ಪಿ.ಸಿ. | 2 | 0 | 2 |
| 8 | ಉರ್ದು ಶಿಕ್ಷಣ ಸಂಯೋಜಕರು | 1 | 0 | 1 |
| 9 | ವೃತ್ತಿ ಶಿಕ್ಷಣ ಪರಿವೀಕ್ಷಕರು | 1 | 0 | 1 |
| 10 | ಪತ್ರಾಂಕಿತ ವ್ಯವಸ್ಥಾಪಕರು | 1 | 1 | 0 |
| 11 | ಅಧೀಕ್ಷಕರು | 2 | 2 | 0 |
| 12 | ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 13 | ಪ್ರ.ದ.ಸ. | 8 | 6 | 2 |
| 14 | ದ್ವಿ.ದ.ಸ. | 4 | 4 | 0 |
| 15 | ಬೆರಳಚ್ಚುಗಾರರು | 2 | 0 | 2 |
| 16 | ಗ್ರೂಪ್ 'ಡಿ' ನೌಕರರು | 5 | 3 | 2 |
| | **ಒಟ್ಟು** | **36** | **25** | **11** |

2) ಶಾಲೆಗಳ ವಿವರ:-

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1262 | 95 | 1357 |
| ಸಮಾಜ ಕಲ್ಯಾಣ ಇಲಾಖೆ | 33 | 31 | 64 |
| ಸ್ಥಳೀಯ ಸಂಸ್ಥೆ | 0 | 0 | 0 |
| ಅನುದಾನಿತ | 09 | 104 | 113 |
| ಅನುದಾನ ರಹಿತ | 129 | 56 | 185 |
| ಸೆಂಟ್ರಲ್ | 0 | 0 | 0 |
| ಒಟ್ಟು | 1433 | 286 | 1719 |

3) ಮಕ್ಕಳ ವಿವರ (ಕೆ.ಡಿ.ಪಿ) ಅಕ್ಟೋಬರ್ 2017

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇಕಡಾ ಹಾಜರಾತಿ |
|---|---|---|---|
| 1 ರಿಂದ 5 | 69718 | 68508 | 98.26 |
| 6 ರಿಂದ 8 | 40526 | 40510 | 99.96 |
| 9 ರಿಂದ 10 | 26945 | 25716 | 89.79 |
| 1 ರಿಂದ 10 | 137189 | 133213 | 97.10 |

4) ಶಿಕ್ಷಕರ ಹುದ್ದೆಗಳು ಮಂಜೂರಾತಿ ಮತ್ತು ಖಾಲಿ ಹುದ್ದೆಗಳ ವಿವರ:-

| ವಿವರ | ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆಗಳು |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 4112 | 3777 | 355 |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು | 850 | 737 | 113 |
| ಒಟ್ಟು | 4962 | 4514 | 468 |

5) 2017-18 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:-

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 355 ಹುದ್ದೆಗಳಲ್ಲಿ 222 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ ಹಾಗೂ 08 ರಿಜರ್ವ್ ಶಿಕ್ಷಕರನ್ನು ನೇಮಿಸಲಾಗಿದೆ
2. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 113 ಹುದ್ದೆಗಳಲ್ಲಿ 32 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ

6) 2017-18 ನೇ ಸಾಲಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಎ.ಜಿ.ಟಿ) 140 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮ ಕೈಗೊಳ್ಳಲಾಗಿದೆ

7) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫಲಿತಾಂಶ ವಿವರ:-

| ಸಾಲು | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2015-16 | 12633 | 10138 | 80.25 | 16 |
| 2016-17 | 12981 | 9326 | 71.84 | 22 |